ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
KARNATAK UNIVERSITY, DHARWAD
"NAAC ACCREDITED WITH "A" GRADE 2014"
ಪರೀಕ್ಷಾ ವಿಭಾಗ,
Examination Section
Registrar (Evaluation)
ಪಾವಟೆನಗರ, ಧಾರವಾಡ
Pavate Nagar, Dharwad
ಕುಲಸಚಿವರು (ಮೌಲ್ಯಮಾಪನ)

No.KU/Exam/2020-21/603 ದಿನಾಂಕ:– 30/10/2020.

## ಸುತ್ತೋಲೆ

ವಿಷಯ:–ಸಪ್ಟೆಂಬರ/ಅಕ್ಟೋಬರ–2020 ರಲ್ಲಿ ಜರುಗಿದ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಕೋವಿಡ್–19 ಕಾರಣದಿಂದ ಹಾಜರಾಗದ ವಿದ್ಯಾರ್ಥಿಗಳಿಗಾಗಿ ಮೊತ್ತೊಂದು ಅವಕಾಶ ನೀಡುತ್ತಿರುವ ಕುರಿತು.

ಉಲ್ಲೇಖ:–ಮಾನ್ಯ ಕುಲಪತಿಗಳ ಆದೇಶ ದಿನಾಂಕ:29.10.2020

ಕವಿವಿ ವ್ಯಾಪ್ತಿಯ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು/ಆಡಳಿತಾಧಿಕಾರಿಗಳು/ಸಂಯೋಜಕರು ಹಾಗೂ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವದೇನೆಂದರೆ, ಸಪ್ಟೆಂಬರ/ಅಕ್ಟೋಬರ –2020 ರಲ್ಲಿ ಜರುಗಿದ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳಿಗೆ ಈಗಾಗಲೇ ಪರೀಕ್ಷಾ ಅರ್ಜಿ ಭರಿಸಿ ಕೋವಿಡ್–19 ನಿಂದಾಗಿ ಪರೀಕ್ಷೆಗೆ ಹಾಜರಾಗದೆ ಇರುವ ವಿದ್ಯಾರ್ಥಿಗಳಿಗೆ ಇನ್ನೊಮ್ಮೆ ಪರೀಕ್ಷೆಯನ್ನು ಬರೆಯಲು ಅವಕಾಶವನ್ನು ನೀಡಲಾಗುವುದು. ಆದ್ದರಿಂದ ತಮ್ಮ ವಿಭಾಗ / ಮಹಾವಿದ್ಯಾಲಯದಲ್ಲಿ ಕೋವಿಡ್–19 ರ ಕಾರಣದಿಂದಾಗಿ ಪರೀಕ್ಷೆ ಬರೆಯದ ವಿದ್ಯಾರ್ಥಿಗಳ ಮಾಹಿತಿಯನ್ನು ಈ ಕೆಳಗಿನ ನಮೂನೆಯಲ್ಲಿ ಭರಿಸಿ examgad@kud.ac.in ಗೆ ಇ–ಮೇಲ್ ಮೂಲಕ ದಿನಾಂಕ:04.11.2020 ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಮುಂದುವರೆದು, ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಎಲ್ಲ ವಿದ್ಯಾರ್ಥಿಗಳಿಗೆ ತಿಳಿಸುವ ಜವಾಬ್ದಾರಿ ಆಯಾ ವಿಭಾಗಗಳ ಮುಖ್ಯಸ್ಥರು ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯರಿಗೆ ಕೊಡಲಾಗಿದೆ.

| S.N | College Code | Register No | Name | Course/Sem | Name of the paper |
|---|---|---|---|---|---|
| 1 | | | | | |

30/10/2020
ಕುಲಸಚಿವರು (ಮೌಲ್ಯಮಾಪನ)
(ಪ್ರೊ.ರವೀಂದ್ರನಾಥ ಎನ್ ಕದಮ್)

ಸೂಚನೆ:

1. ವಿದ್ಯಾರ್ಥಿಯು ಈಗಾಗಲೆ ಪರೀಕ್ಷಾ ಅರ್ಜಿ ಭರಿಸಿರಬೇಕು.
2. ಈಗಾಗಲೇ ವಿದ್ಯಾರ್ಥಿಗಳಿಗೆ ಜನರೇಟ್ ಆದ ಹಾಲ್‌ಟಿಕೆಟನ್ನೇ ಸದರಿ ಪರೀಕ್ಷೆಗಳಿಗೆ ಬಳಸಲಾಗುವುದು.
3. ವಿದ್ಯಾರ್ಥಿಗಳ ಮಾಹಿತಿಯನ್ನಾಧರಿಸಿ ಪರೀಕ್ಷಾ ಕೇಂದ್ರಗಳನ್ನು ನಂತರ ನಿರ್ದರಿಸಲಾಗುವುದು.
4. ವಿದ್ಯಾರ್ಥಿಯು ಕೋವಿಡ್ ಸಂಬಂಧ ಪೂರಕ ದಾಖಲೆಗಳನ್ನು ಮುಖ್ಯಸ್ಥರು/ಕಾಲೇಜ ಮುಖಾಂತರ ಕವಿವಿಗೆ ಸಲ್ಲಿಸುವುದು.

**ಗೆ,**

ಕ.ವಿ.ವಿ ವ್ಯಾಪ್ತಿಯ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು/ಆಡಳಿತಾಧಿಕಾರಿಗಳು ಹಾಗೂ ಎಲ್ಲ ಸಂಲಗ್ನ ಹಾಗೂ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಮಾಹಿತಿಗಾಗಿ.

ಪ್ರತಿಗಳು:– ಮಾಹಿತಿಗಾಗಿ

1. ಸಿಸ್ಟಮ್ ಎನಾಲಿಸ್ಟ್, ಗಣಕಯಂತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. ಕುಲಪತಿಗಳ, ಕುಲಸಚಿವರ, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳು ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
3. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಎಲ್ಲ ಅಧೀಕ್ಷಕರುಗಳಿಗೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.

ದೂರವಾಣಿ: ೦೮೩೬–೨೨೧೫೩೭೫
ಫ್ಯಾಕ್ಸ್ : ೦೮೩೬–೨೭೪೧೯೨೮
www.kud.ac.in
registrar.evaluation@kud.ac.in
Tel. No. 0836-2215375
Fax No. 0836-2741928